ಚಿತ್ರದುರ್ಗ
17 ಮೇ 2013
ಶುಕ್ರವಾರ
ಪುಟ: 14+8

ಚಿತ್ರದುರ್ಗ

ತೆಲುಗು ನಾಡಿನಲ್ಲಿ ಕನ್ನಡ ಡಿಂಡಿಮ

ಗಡಿನಾಡ ಕನ್ನಡಿಗರ ಸಮಸ್ಯೆ ಸ್ಪಂದಿಸಿ

ಚಿತ್ರದುರ್ಗ: ಗಡಿನಾಡ ಕನ್ನಡಿಗರ ಹಲವು ಸಮಸ್ಯೆಗಳನ್ನು ನಿವಾರಣೆ ಮಾಡುವಲ್ಲಿ ಸರ್ಕಾರ, ಜನಪ್ರತಿನಿಧಿಗಳು ಮುಂದಾಗಬೇಕೆಂದು ಕನ್ನಡ ಸಾಹಿತ್ಯ ಪರಿಷತ್ ಆಂಧ್ರ ಗಡಿನಾಡ ಘಟಕದ ಅಧ್ಯಕ್ಷ ಪ್ರೊ. ವಿ. ಅಗ್ರಹಾರಂ ಎಚ್.ಬಿ. ಶಿವಕುಮಾರ್ ಒತ್ತಾಯಿಸಿದರು.

ಕನ್ನಡ ಸಾಹಿತ್ಯ ಪರಿಷತ್ ಆಂಧ್ರ ಗಡಿನಾಡ ಘಟಕದ ವತಿಯಿಂದ ಜಿಲ್ಲೆಯ ನೆರೆಯ ಆಂಧ್ರ ಪ್ರದೇಶದ ಅನಂತಪುರ ಜಿಲ್ಲೆ ಮಡಕಶಿರಾ ತಾಲೂಕಿನ ಅಮರಾಪುರಂ ಮಂಡಲ್ ವ್ಯಾಪ್ತಿಯ ಕನ್ನಡಿಗರೆ ಹೆಚ್ಚಿರುವ ಕುಗ್ರಾಮ ವಲಸೆಯಲ್ಲಿ ಆಯೋಜಿಸಲಾಗಿದ್ದ ಮೂರನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅವರು ಮಾತನಾಡಿದರು.

ಇಲ್ಲಿನ ಕನ್ನಡಿಗರು ಉದ್ಯೋಗಕ್ಕೆ ಹೋಗಬೇಕಾದರೆ ಕರ್ನಾಟಕ ರಾಜ್ಯ ಸರ್ಕಾರ ಆದಾಯ ಪ್ರಮಾಣ

ಆಂಧ್ರ, ತಮಿಳು, ಕೇರಳ, ಮಹಾರಾಷ್ಟ್ರ ಮತ್ತಿತರ ರಾಜ್ಯಗಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಕನ್ನಡಿಗರಿದ್ದರೂ ಅಂತಹ ಪ್ರದೇಶಗಳನ್ನು ಕನ್ನಡಿಗರಿಗೆ ಬಿಟ್ಟು ಕೊಡದೇ ಇರುವುದರಿಂದ ಅವರು ಭಾಷಾ ಅಲ್ಪಸಂಖ್ಯಾತರಾಗಿ ಉಳಿದುಕೊಂಡು ಹಲವು ಸಂಕಷ್ಟಗಳನ್ನು ಎದುರಿಸುತ್ತಿದ್ದಾರೆ.

◆

ಸಮ್ಮೇಳನಾಧ್ಯಕ್ಷ

ಪತ್ರ ಶಿಫಾರಸ್ಸು ಮಾಡಲಾಗುತ್ತಿದೆ. ಇದರಿಂದ ಉನ್ನತ ಹುದ್ದೆಗಳು ಸೇರಿದಂತೆ ರಾಜ್ಯದ ಯಾವುದೇ ಹುದ್ದೆಗಳನ್ನು ಪಡೆಯಲು ಗಡಿನಾಡ ಕನ್ನಡಿಗರು ವಂಚಿತರಾಗುತ್ತಿದ್ದಾರೆ ಎಂದು ವಿಷಾದಿಸಿದರು.

ಗಡಿನಾಡ ಕನ್ನಡಿಗರ ಹಲವು ಸಮಸ್ಯೆಗಳನ್ನು ಬಗೆಹರಿಸಿ ಎಂದು ರಾಜ್ಯ ಸರ್ಕಾರಕ್ಕೆ ಹಲವು ಸಲ ಮನವಿ ಸಲ್ಲಿಸಿದ್ದರೂ ಏನು ಪ್ರಯೋಜನವಾಗಿಲ್ಲ. ಗಡಿ ಭಾಗದಲ್ಲಿ ಅತಿ ಹೆಚ್ಚು ಕನ್ನಡ ಶಾಲೆಗಳನ್ನು ತೆರೆಯಬೇಕು. ಗಡಿನಾಡ ಕನ್ನಡಿಗರಿಗೆ ಉದ್ಯೋಗದಲ್ಲಿ ಶೇ.80ರಷ್ಟು ಮೀಸಲಿಡಬೇಕು. ಗಡಿನಾಡ ಕನ್ನಡಿಗರ ಪರಿಸ್ಥಿತಿ ಸುಧಾರಣೆಗೆ ಪರಿಣಾಮಕಾರಿ ಯೋಜನೆಗಳನ್ನು ಜಾರಿಗೆ ತರಬೇಕು ಎಂದು ಅವರು ಒತ್ತಾಯಿಸಿದರು.

ಜನಪ್ರತಿನಿಧಿಗಳು ಮತ್ತು ಸರ್ಕಾರ ಸಾಹಿತ್ಯ ಪರಿಷತ್ ಕೆಲಸಗಳನ್ನು ಹೆಚ್ಚಿನ ರೀತಿಯಲ್ಲಿ ಮಾಡಬೇಕು ಎಂದರು.

ಶಿಕ್ಷಣ ತಜ್ಞ ಬೆಂಗಳೂರಿನ ಡಾ. ವೂಡೇ ಪಿ. ಕೃಷ್ಣ ಸಮ್ಮೇಳನ ಉದ್ಘಾಟಿಸಿ ಮಾತನಾಡಿ, ತೆಲುಗು ಮತ್ತು ಕನ್ನಡಿಗರಲ್ಲಿ ಹೆಚ್ಚಿನ ಸಾಮ್ಯತೆ ಇದೆ. ಇವರಿಬ್ಬರಲ್ಲೂ ಕದನಗಳು ನಡೆಯುತ್ತಿಲ್ಲ. ಆದರೆ ತಮಿಳುನಾಡು ಸರ್ಕಾರ ಭಾಷೆ ಮತ್ತು ಜಲ ವಿಚಾರವಾಗಿ ನಿತ್ಯ ಕ್ಯಾತೆ ತೆಗೆದು ಅಶಾಂತಿ ಕದಡುತ್ತಿದೆ. ಭಾಷೆ ಮತ್ತು ಪ್ರಾದೇಶಿಕತೆ ಹೆಸರಲ್ಲಿ ಜನ ಸಾಮಾನ್ಯರ ನೆಮ್ಮದಿಗೆ ಭಂಗ ತರುವ ಕೆಲಸ ಮಾಡಬಾರದೆ ಎಂದು ಅವರು ಎಚ್ಚರಿಸಿದರರು.

ಬೆಂಗಳೂರಿನಲ್ಲಿ ಕನ್ನಡಿಗರು ಅಲ್ಪಸಂಖ್ಯಾತರಾಗುತ್ತಿರುವುದು ಆತಂಕದ ವಿಚಾರವಾಗಿದೆ. ಇದರ ಬಗ್ಗೆ ರಾಜ್ಯ ಸರ್ಕಾರ ಗಂಭೀರ ಚಿಂತನೆ ಮಾಡಬೇಕು ಎಂದು ಒತ್ತಾಯಿಸಿದರು.

ಭಾಷೆ ಮತ್ತು ಜಲ ಸಮಸ್ಯೆಯನ್ನು ತಮಿಳು ಸರ್ಕಾರ ಮತ್ತು ರಾಜ್ಯ ಸರ್ಕಾರ ಜಟಿಲಗೊಳಿಸದೇ ಇತ್ಯಾರ್ಥ ಪಡಿಸಬೇಕು ಎಂದು ಒತ್ತಾಯಿಸಿದರು.

ಗಡಿನಾಡ ಕನ್ನಡಿಗರ ರಕ್ಷಣೆಗೆ ರಾಜ್ಯ ಸರ್ಕಾರ ವಿಶೇಷ ಒತ್ತು ನೀಡಬೇಕು. ಗಡಿನಾಡ ಕನ್ನಡಿಗರು ಆಸೆಗಣ್ಣಿನಿಂದ ರಾಜ್ಯ ಸರ್ಕಾರದತ್ತ ದೃಷ್ಟಿ ಹಾಯಿಸಿಕೊಂಡಿರುತ್ತಾರೆ. ಗಡಿ ಭಾಗದವರ ಆಸೆಗಳಿಗೆ ತಣ್ಣೀರು ಎರಚುವ ಕೆಲಸ ಮಾಡಬಾರದು ಎಂದು ತಿಳಿಸಿದರು. ಸಮ್ಮೇಳನಾಧ್ಯಕ್ಷ ಡಾ. ಮೀರಾಸಾಬಿಹಳ್ಳಿ ಶಿವಣ್ಣ ಮಾತನಾಡಿ, ಗಡಿ ಭಾಗದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಕನ್ನಡಿಗರಿದ್ದು ಅವರು ಸ್ಥಿತಿ ಚಿಂತಾಜನಕವಾಗಿದೆ. ಅವರನ್ನು ಭಾಷಾ ಪ್ರಾಂತ್ಯದ ಹೆಸರಲ್ಲಿ ಕಟ್ಟಿ ಹಾಕಲಾಗುತ್ತಿದೆ. ಭಾಷಾವಾರು ಸಮಸ್ಯೆಗಳನ್ನು ನಿವಾರಣೆ ಮಾಡುವ ಕೆಲಸವನ್ನು ರಾಜ್ಯ ಸರ್ಕಾರ ಮಾಡಬೇಕು ಎಂದು ಒತ್ತಾಯಿಸಿದರು.

ನಿಕಟಪೂರ್ವ ಸಮ್ಮೇಳನಾಧ್ಯಕ್ಷ ಎಚ್.ಕೆ. ಅನಂತರಾವ್, ರಾಮಚಂದ್ರಪ್ಪ, ಖ್ಯಾತ ಸಂಶೋಧಕ ಡಾ. ಬಿ. ರಾಜಶೇಖರಪ್ಪ, ಕೆಂಕರೆ ಜಿ. ಹನುಮಂತೇಗೌಡ, ಪ್ರೊ. ವಿ. ವೀರಣ್ಣ, ಶಿವಣ್ಣ ಅವರ ಬದುಕು ಬರಹ, ಡಾ. ಜಿ.ವಿ. ಆನಂದಮೂರ್ತಿ, ಡಾ. ಚಿಕ್ಕಣ್ಣ ಎಣ್ಣೆಕಟ್ಟೆ, ಪ್ರೊ. ಕೆ. ಚಂದ್ರಣ್ಣ ಮತ್ತಿತರರು ಉಪಸ್ಥಿತರಿದ್ದರು.

ಅಧ್ಯಕ್ಷರ ಅದ್ದೂರಿ ಮೆರವಣಿಗೆ

ಚಿತ್ರದುರ್ಗ: ಕನ್ನಡ ಸಾಹಿತ್ಯ ಪರಿಷತ್ ಆಂಧ್ರ ಗಡಿನಾಡ ಘಟಕದ ವತಿಯಿಂದ ಜಿಲ್ಲೆಯ ನೆರೆಯ ಆಂಧ್ರ ಪ್ರದೇಶದ ಅನಂತಪುರ ಜಿಲ್ಲೆ ಮಡಕಶಿರಾ ತಾಲೂಕಿನ ಅಮರಾಪುರಂ ಮಂಡಲ್ ವ್ಯಾಪ್ತಿಯ ಕನ್ನಡಿಗರೆ ಹೆಚ್ಚಿರುವ ಕುಗ್ರಾಮ ವಲಸೆಯಲ್ಲಿ ಆಯೋಜಿಸಲಾಗಿದ್ದ ಮೂರನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅದ್ದೂರಿ ಚಾಲನೆ ದೊರೆತು ತೆಲುಗು ನಾಡಿನಲ್ಲಿ ಕನ್ನಡ ಡಿಂಡಿಮ ಮೊಳಗಿತು.

ಸಮ್ಮೇಳನದ ಅಧ್ಯಕ್ಷ ಡಾ. ಮೀರಾಸಾಬಿಹಳ್ಳಿ ಶಿವಣ್ಣ ಅವರನ್ನು ಸಾರೋಟ್‌ನಲ್ಲಿ ಕೂರಿಸಿ ಅದ್ದೂರಿಯಾಗಿ ಮೆರವಣಿಗೆ ಮಾಡಲಾಯಿತು. ನಾಡಿನ ನಾನಾ ಭಾಗದಿಂದ ಆಗಮಿಸಿದ್ದ ಕನ್ನಡಾಭಿಮಾನಿಗಳು, ಸಾರ್ವಜನಿಕರು, ಕಲಾವಿದರು, ಜನಪ್ರತಿನಿಧಿಗಳ ಹರ್ಷೋದ್ಗಾರಗಳ ನಡುವೆ ಸಮ್ಮೇಳನಾಧ್ಯಕ್ಷ ಡಾ. ಮೀರಾಸಾಬಿಹಳ್ಳಿ ಶಿವಣ್ಣ ಅವರು ಸಿಂಗರಿಸಿದ್ದ ಪುಷ್ಪಾಲಂಕೃತ ಸಾರೋಟಿನಲ್ಲಿ ಕುಳಿತ ಸಾಗಿದ ಸಮ್ಮೇಳನಾಧ್ಯಕ್ಷರಿಗೆ ಅದ್ದೂರಿ ಸ್ವಾಗತ ದೊರೆಯಿತು.

ಸಂಘ ಸಂಸ್ಥೆಗಳ ಪದಾಧಿಕಾರಿಗಳು ಅಧ್ಯಕ್ಷರಿಗೆ ಗೌರವ ವಂದನೆ ಸಲ್ಲಿಸಿದರು. ನಂತರ ಜನತೆ ಮತ್ತು ಕಲಾತಂಡಗಳು ಮುಂಚೂಣಿಯಲ್ಲಿ ನಿಂತು ಶಿವಣ್ಣನವರ ಸಾರೋಟಿಗೆ ಸಾಥ್ ನೀಡಿದವು. ಜನಪದ ಕಲಾಮೇಳಕ್ಕೆ ಸಂಭ್ರಮದ ಚಾಲನೆ ನೀಡಲಾಯಿತು.

ಗ್ರಾಮದ ಮಹಿಳೆಯರು ಪೂರ್ಣಕುಂಭದೊಂದಿಗೆ ಅದ್ದೂರಿ ಸ್ವಾಗತ ಕೋರಿದರು. ಬಳಿಕ ರಾಜ್ಯ ಹಾಗೂ ಹೊರರಾಜ್ಯಗಳಿಂದ ಬಂದಿದ್ದ ವಿವಿಧ ಪ್ರಕಾರದ ಜಾನಪದ ಕಲಾ ತಂಡಗಳು ತಮ್ಮದೇ ಆದ ವಿಶಿಷ್ಟ ಪ್ರದರ್ಶನ ನೀಡುತ್ತಾ ಸಾಗಿದ ದೃಶ್ಯ ಕಿಲೋಮೀಟರ್ ನಷ್ಟು ಉದ್ದ ಸಾಗಿತು. ಇದರಲ್ಲಿ ಮುಖ್ಯವಾಗಿ ಕೋಲಾಟ, ಡೊಳ್ಳು, ತಮಟೆ, ಹಗಲುವೇಷ, ದೊಡ್ಡಾಟ, ಮಹಿಳಾ ಪುರುಷರ ವೀರಗಾಸೆ, ಜಗ್ಗಲಗಿ ಮೇಳ, ಕೊಂಬುಕಹಳೆ, ಭಜನೆ, ವೀರಗಾಸೆನೃತ್ಯ, ಪಟಕುಣಿತ, ಹುಲಿವೇಷ, ನಂದಿಕೋಲು, ನಗಾರಿ, ಸಮಾಳ, ಮಹಿಳಾ ತಮಟೆ, ಡೊಳ್ಳು, ಬ್ಯಾಂಡ್ ವಾದ್ಯ, ಕೀಲುಕುಣಿತ, ಹೆಜ್ಜೆಮೇಳ, ಗರುಡಗೊಂಬೆ, ವೀರ ಮಕ್ಕಳ ಕುಣಿತ, ಮರಗಾಲು, ಮಹಿಳೆಯರ ನೃತ್ಯ, ಭೂತನ ಕುಣಿತ... ಹೀಗೆ ಹಲವು ತಂಡಗಳು ತಮ್ಮದೇ ಕಲೆ ಪ್ರದರ್ಶಿಸುತ್ತಾ ಸಾಗುತ್ತಿದ್ದ ದೃಶ್ಯ, ರಸ್ತೆ ಬದಿಯಲಿ, ಮನೆ, ಮಹಡಿ, ಮಹಲುಗಳ ಮೇಲೆ ನಿಂತು ವೀಕ್ಷಿಸುತ್ತಿದ್ದ ಜನತೆಗೆ ಖುಷಿಕೊಟ್ಟಿತು.

ಕನ್ನಡ ಸಾಹಿತ್ಯ ಪರಿಷತ್ ಆಂಧ್ರ ಗಡಿನಾಡ ಘಟಕದ ಅಧ್ಯಕ್ಷ ಪ್ರೊ. ವಿ. ಅಗ್ರಹಾರಂ, ಎಚ್.ಬಿ. ಶಿವಕುಮಾರ್ ಮೆರವಣಿಗೆಗೆ ಚಾಲನೆ ನೀಡಿದರು. ಶಿಕ್ಷಣ ತಜ್ಞ ಬೆಂಗಳೂರಿನ ಡಾ. ವೂಡೇ ಪಿ. ಕೃಷ್ಣ, ನಿಕಟಪೂರ್ವ ಸಮ್ಮೇಳನಾಧ್ಯಕ್ಷ ಎಚ್.ಕೆ. ಅನಂತರಾವ್, ಚಿತ್ರದುರ್ಗದ ಖ್ಯಾತ ಸಂಶೋಧಕ ಡಾ. ಬಿ. ರಾಜಶೇಖರಪ್ಪ, ಕೆಂಕರೆಯ ಜಿ. ಹನುಮಂತೇಗೌಡ, ಪ್ರೊ. ವಿ. ವೀರಣ್ಣ, ಡಾ. ಜಿ.ವಿ. ಆನಂದಮೂರ್ತಿ, ಡಾ. ಚಿಕ್ಕಣ್ಣ, ಪ್ರೊ. ಕೆ. ಚಂದ್ರಣ್ಣ ಮತ್ತಿತರ ಸಾಹಿತಿಗಳು, ಗ್ರಾಮಸ್ಥರು, ಅಭಿಮಾನಿಗಳು ಮೆರವಣಿಗೆಗೆ ಸಾಥ್ ನೀಡಿದರು.

ಚಿತ್ರದುರ್ಗ: ಶಿಕ್ಷಣ ತಜ್ಞ ಬೆಂಗಳೂರಿನ ಡಾ. ವೂಡೇ ಪಿ. ಕೃಷ್ಣ ಸಮ್ಮೇಳನ ಉದ್ಘಾಟಿಸಿದರು.

ಚಿತ್ರದುರ್ಗ: ಸಮ್ಮೇಳನಾಧ್ಯಕ್ಷ ಡಾ. ಮೀರಾಸಾಬಿಹಳ್ಳಿ ಶಿವಣ್ಣ ಮಾತನಾಡಿದರು.

ಚಿತ್ರದುರ್ಗ: ತೆಲುಗು ನಾಡಿನಲ್ಲಿ ವಲಸೆ ಗ್ರಾಮದಲ್ಲಿ ಆಯೋಜಿಸಲಾಗಿದ್ದ ಮೂರನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷ ಡಾ. ಮೀರಾಸಾಬಿಹಳ್ಳಿ ಶಿವಣ್ಣ ಅವರನ್ನು ಸಾರೋಟ್‌ನಲ್ಲಿ ಮೆರವಣಿಗೆ ಮಾಡಲಾಯಿತು.

ಸ್ವಾಭಿಮಾನಿ ಕರ್ನಾಟಕ ವೇದಿಕೆ ಆಶ್ರಯದಲ್ಲಿ ಚಿಂತನ ಗೋಷ್ಠಿ: ಕಾನೂನಿಗನುಸಾರವಾಗಿ ರಾಜ್ಯಭಾರ ಮಾಡಿ

ಸಿದ್ದರಾಮಯ್ಯ ಸರ್ಕಾರಕ್ಕೆ ಸ್ವಾತಂತ್ರ್ಯ ಸೇನಾನಿ ಡಾ. ಎಚ್.ಎಸ್. ದೊರೆಸ್ವಾಮಿ ಕಿವಿ ಮಾತು

ಡಾ.ಎಚ್.ಎಸ್. ದೊರೆಸ್ವಾಮಿ ಅವರು ಕನ್ನಡ ಬಾವುಟ ಬೀಸಿ ಗೋಷ್ಠಿ ಉದ್ಘಾಟಿಸಿದರು. ಚಿತ್ರದಲ್ಲಿ ಜಗದೀಶ್‌ರೆಡ್ಡಿ, ದ್ವಾರನಕುಂಟೆ ಪಾತಣ್ಣ, ಡಾ. ವೂಡೆ ಪಿ. ಕೃಷ್ಣ ಮತ್ತು ಹನುಮಂತರಾಯ ಇದ್ದಾರೆ.

ಉಪನ್ಯಾಸಗಳನ್ನು ಆಸಕ್ತಿಯಿಂದ ಆಲಿಸುತ್ತಿರುವ ಹೆಬ್ಬಗೋಡಿ ಗೋಪಾಲ್ ಮತ್ತಿತರ ಸಭಿಕರು.

ನಳಿನಿ ಮಹಾದೇವಸ್ವಾಮಿ ಅವರಿಂದ ವಂದನಾರ್ಪಣೆ.

ಕಳೆದ 3-4 ವರ್ಷಗಳಲ್ಲಿ ಕರ್ನಾಟಕದಲ್ಲಿ ಭ್ರಷ್ಟಾಚಾರ ಮಿತಿಮೀರಿದುದರಿಂದ, ಮುಖ್ಯಮಂತ್ರಿ ಆಗಿದ್ದವರೇ ಭ್ರಷ್ಟರ ಗುಂಪಿನ ಮುಖಂಡರಾಗಿದ್ದುದರಿಂದ ಜನ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿದರೇ ಹೊರತು ಆ ಪಕ್ಷದ ಮೇಲಿನ ಪ್ರೀತಿಯಿಂದಲ್ಲ. ಇದನ್ನು ಕಾಂಗ್ರೆಸ್ ಪಕ್ಷ ಅರಿತುಕೊಂಡು, ತಮಗೆ ಜನರ ಸೇವೆ ಮಾಡುವ ಅವಕಾಶ ದೊರೆತಿದೆ ಎಂದು ಪ್ರಾಮಾಣಿಕತೆಯಿಂದ ಮುನ್ನಡಿ ಇಡಬೇಕಾಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಜೆಯೇ ಪ್ರಭುವಾದರೂ ವೋಟು ಮಾಡುವವಷ್ಟಕ್ಕೆ ಮಾತ್ರ ಆತನ ಪರಮಾಧಿಕಾರ ಸೀಮಿತವಾಗಿದೆ. ಚುನಾವಣೆಯ ನಂತರ ಗೆದ್ದ ಮಂದಿಯೇ ಪ್ರಭುಗಳಂತಾಗುತ್ತಾರೆ. ಪ್ರಜೆ ಮಾತ್ರ ಎಲ್ಲಿದ್ದನೋ ಅಲ್ಲಿಯೇ ಇರುತ್ತಾನೆ. ಇದಕ್ಕೆ ನಾವು ಹೊಣೆಗೇಡಿಗಳಾಗಿರುವುದೇ ಕಾರಣ. ಭ್ರಷ್ಟರನ್ನು ಗಣಿಕಳ್ಳರನ್ನು ಮಂತ್ರಿಗಳನ್ನಾಗಿ ಮಾಡಬೇಡಿ ಎಂದು ನಾನು ಸಿದ್ದರಾಮಯ್ಯನವರಿಗೆ ಬರೆದ ಪತ್ರ ಎಲ್ಲರ ಭಾವನೆಗಳನ್ನು ಪ್ರತಿನಿಧಿಸಿದೆ. ಈಗಿನ ಮಂತ್ರಿಮಂಡಲದಲ್ಲಿ ಭ್ರಷ್ಟರಿದ್ದಾರೆ, ಆದರೆ ಅತಿ ಭ್ರಷ್ಟರಿಲ್ಲ ಎಂಬುದೇ ಸಮಾಧಾನ. ಏನೇ ಆಗಲಿ, ಹಿಂದೆ ಕೆಂಗಲ್ ಹನುಮಂತಯ್ಯ, ಕಡಿದಾಳ್ ಮಂಜಪ್ಪ, ಸಿದ್ದವನಹಳ್ಳಿ ನಿಜಲಿಂಗಪ್ಪ ಮೊದಲಾದವರ ಮಾರ್ಗ ಅನುಸರಿಸಿ ಕಾನೂನಿಗನುಸಾರವಾಗಿ ರಾಜ್ಯಭಾರ ನಡೆಸಿ ಎಂದು ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಡಾ. ಎಚ್.ಎಸ್. ದೊರೆಸ್ವಾಮಿ ಅವರು ನೂತನ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಅವರ ಸಚಿವ ಸಹೋದ್ಯೋಗಿಗಳಿಗೆ ಕಿವಿಮಾತು ಹೇಳಿದರು.

ಸ್ವಾಭಿಮಾನಿ ಕರ್ನಾಟಕ ವೇದಿಕೆ 24-5-2013ರಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ನೂತನ ಸರ್ಕಾರ ಮತ್ತು ಕನ್ನಡದ ಸವಾಲುಗಳು ಚಿಂತನಗೋಷ್ಠಿ ಉದ್ಘಾಟಿಸಿ ಡಾ. ಎಚ್.ಎಸ್. ದೊರೆಸ್ವಾಮಿ ಮಾತನಾಡಿದರು.

ಲೋಕಾಯುಕ್ತರ ದಾಳಿಗೊಳಗಾದ ಭ್ರಷ್ಟ ಅಧಿಕಾರಿಗಳೂ ಕೆಲವೇ ದಿನಗಳಲ್ಲಿ ಬಡ್ತಿ ಹೊಂದಿ ಆಯಕಟ್ಟಿನ ಸ್ಥಳಗಳಲ್ಲಿರುತ್ತಾರೆ ಎಂದು ಸೋಜಿಗ ವ್ಯಕ್ತಪಡಿಸಿದ ಡಾ. ದೊರೆಸ್ವಾಮಿ ಅವರು, ಎ.ಟಿ. ರಾಮಸ್ವಾಮಿ ಸಮಿತಿ ಮತ್ತು ಬಾಲಸುಬ್ರಹ್ಮಣ್ಯಂ ಸಮಿತಿ ವರದಿಗಳನ್ನು ಪರಿಶೀಲಿಸಿ ಅಕ್ರಮವಾಗಿ ಸ್ವಾಧೀನಪಡಿಸಿಕೊಳ್ಳಲಾಗಿರುವ ಸರ್ಕಾರಿ ಭೂಮಿಯನ್ನು ವಶಕ್ಕೆ ತೆಗೆದುಕೊಳ್ಳಿ. ಯಾವುದೇ ಕಾರಣಕ್ಕೂ ಕನ್ನಡ ಶಾಲೆಗಳನ್ನು ಮುಚ್ಚಬೇಡಿ. 1 ರಿಂದ 8ನೇ ತರಗತಿಯವರೆಗೂ ಖಡ್ಡಾಯವಾಗಿ ಕನ್ನಡ ಮಾಧ್ಯಮ ಮಾಡಿ. ಮಹಿಷಿ ವರದಿಯನ್ನು ಅನುಷ್ಠಾನಗೊಳಿಸಿ, ಆದ್ಯತೆಯ ಮೇರೆಗೆ ಕನ್ನಡಿಗರಿಗೆ ಕೆಲಸ ಕೊಡಿ 10 ವರ್ಷಗಳ ಹಿಂದೆ ನಿಮ್ಮ ಆಸ್ತಿ ಎಷ್ಟಿತ್ತು? ಈಗ ಎಷ್ಟಿದೆ ಎಂದು ಪ್ರಾಮಾಣಿಕವಾಗಿ ವಿವರಗಳನ್ನು ನೀಡಿದವರನ್ನು ಮಾತ್ರ ಅಧಿಕಾರದ ಗದ್ದುಗೆಗೇರಿಸಿ. ಪ್ರತಿನಿತ್ಯ ಕೊಲೆ, ಸುಲಿಗೆ, ಗೂಂಡಾಗಿರಿ ಮೊದಲಾದ ಸುದ್ದಿಗಳನ್ನು ಕೇಳಿಕೇಳಿ ಜರ್ಝರಿತರಾಗಿದ್ದೇವೆ. ಇವುಗಳು ಇಲ್ಲದಂತೆ ಮಾಡಲು ಪೊಲೀಸರ ಜೊತೆಗೆ ಸಾರ್ವಜನಿಕರೂ ಕೈಜೋಡಿಸಬೇಕು. ಮಕ್ಕಳಿಗೆ ಒಳ್ಳೆಯ ಪೌಷ್ಟಿಕ ಆಹಾರ ದೊರೆಯುವಂತಾಗಬೇಕು. ಸರ್ಕಾರವನ್ನು ಓಲೈಸಲು ಹೋಗಬೇಡಿ. ಯಾವುದೇ ಅನ್ಯಾಯವಾದಾಗ ಅಧಿಕಾರಸ್ಥರನ್ನು ಹಿಡಿದು ನಿಲ್ಲಿಸಿ ಪ್ರಶ್ನಿಸಿ. ಯಾವುದೇ ಕಾರಣಕ್ಕೂ ಅಸ್ತಿತ್ವಕ್ಕೆ ಬಂದಿರುವ ಸರ್ಕಾರವನ್ನು ಉಳ್ಳವರ ಸರ್ಕಾರ ಆಗಲು ಬಿಡಬೇಡಿ ಎಂದು ಜನರಿಗೆ ಎಚ್ಚರಿಕೆಯ ಮಾತುಗಳನ್ನು ಹೇಳಿದರು.

ವೇದಿಕೆಯ ಪ್ರಧಾನ ಕಾರ್ಯದರ್ಶಿ ಹನುಮಂತರಾಯ ಅವರು ನಿರೂಪಿಸಿದ ಕಾರ್ಯಕ್ರಮ ಎಸ್.ಎಸ್. ಪಡಶೆಟ್ಟಿ, ಎಂ.ಆರ್. ಅನಂತಮೂರ್ತಿ, ಮಲ್ಲೇಶ್‌ಪ್ರಭು ಮತ್ತು ಎಸ್.ಜಿ. ಮಾಲತಿಶೆಟ್ಟಿ ಅವರು ಕನ್ನಡ ಗೀತೆಗಳನ್ನು ಹಾಡುವುದರೊಂದಿಗೆ ಆರಂಭವಾಯಿತು. ಕಾರ್ಯಾಧ್ಯಕ್ಷರು ಬಸಪ್ಪ ಸ್ವಾಗತಿಸಿದರು. ಮುಖ್ಯ ಉಪನ್ಯಾಸಕರಾಗಿದ್ದ ಶಿಕ್ಷಣ ತಜ್ಞ ಶೇಷಾದ್ರಿಪುರ ಶಿಕ್ಷಣ ದತ್ತಿಯ ಗೌ. ಪ್ರಧಾನ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣ ಅವರು ವಿಶ್ವವಿದ್ಯಾಲಯದ ಘಟಿಕೋತ್ಸವ ಭಾಷಣ ದಂತಹ ಉತ್ಕೃಷ್ಟ ಭಾಷಣ ಮಾಡಿದ ಡಾ.ಎಚ್.ಎಸ್. ದೊರೆಸ್ವಾಮಿ ಅವರನ್ನು ಮುಕ್ತ ಕಂಠದಿಂದ ಪ್ರಶಂಸಿಸಿದರು.

ಹಿಂದೆ ಮಂತ್ರಿ ಎಂದರೆ ಚಿಂತಕ ಎನ್ನಲಾಗುತ್ತಿತ್ತು. ಈಗ ಮಂತ್ರಿ ಎಂದರೆ ದುರಾಲೋಚನೆಯವರು ಎಂದು ಅರ್ಥೈಸಲಾಗುತ್ತಿದೆ. ಈ ಭಾವನೆ ಜನರ ಮನದಾಳದಿಂದ ತೊಲಗುವಂತೆ ಸಿದ್ದರಾಮಯ್ಯ ಮತ್ತವರ ಸಚಿವ ಸಹೋದ್ಯೋಗಿಗಳು ಮಾಡಬೇಕು. ವಿಧಾನ ಮಂಡಲದಲ್ಲಿ ಯಾವುದೇ ಕಾಯಿದೆಗಳು ಚರ್ಚೆ ಇಲ್ಲದೆ ಶಾಸನವಾಗಬಾರದು. ಕೆಂಗಲ್ ಹನುಮಂತಯ್ಯನವರು ಮುಖ್ಯಮಂತ್ರಿಯಾಗಿದ್ದಾಗ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯನ್ನು ಆರಂಭಿಸಿದರು. ಅಂತಹ ಇಲಾಖೆಯ ಬಗೆಗೆ ಸಿದ್ದರಾಮಯ್ಯನವರು ಪ್ರಾಶಸ್ತ್ಯ ನೀಡಬೇಕು. ಕಾವೇರಿ ವಿವಾದ ಮತ್ತಿತರ ಸಮಸ್ಯೆಗಳ ಬಗೆಗೆ ಕಂಟಕ ಬಂದಾಗ ಮಾತ್ರ ತಲೆ ಕೆಡಿಸಿಕೊಳ್ಳದೆ, ಸದಾ ಕಾಲ ಸನ್ನದ್ಧವಾಗಿರುವಂತಹ ಮಾರ್ಗೋಪಾಯಗಳನ್ನು ಕಂಡುಕೊಳ್ಳಬೇಕು ಎಂದು ಡಾ. ವೂಡೆ ಪಿ. ಕೃಷ್ಣ ಸೂಚಿಸಿದರು.

ಸರ್ಕಾರದ ಎಲ್ಲಾ ವ್ಯವಹಾರಗಳೂ ಕನ್ನಡದಲ್ಲೇ ಆಗಬೇಕು ಎಂದು ಆಗ್ರಹಿಸಿದ ಡಾ. ವೂಡೆ ಪಿ. ಕೃಷ್ಣ, ಹಿಂದೊಮ್ಮೆ ಕಡಿದಾಳ್ ಮಂಜಪ್ಪನವರು ಹೇಳಿದ ಬದುಕಿಗೆ ಪರ್ಯಾಯ ಮಾರ್ಗವಿರುವವರು ಮಾತ್ರ ಶಾಸನ ಸಭೆಗೆ ಬರಬೇಕು ಎಂಬ ಮಾತುಗಳನ್ನು ನೆನಪಿಸಿಕೊಂಡು. ಇಂದು ರಾಜಕೀಯವನ್ನೇ ಉದ್ಯೋಗ ಮಾಡಿಕೊಂಡಿರುವವರು ಸುಸ್ವಾರು ಮಂದಿ ಎಂದು ಆತಂಕದ ಧ್ವನಿಯಲ್ಲಿ ಹೇಳಿದರು. ಹಣ ಸೂರೆ ಹೊಡೆಯಲು ರಾಜಕಾರಣಿಗಳು ಮತ್ತು ಅಧಿಕಾರಿಗಳು ಅಭಿವೃದ್ಧಿ ಮಂತ್ರ ಜಪಿಸುತ್ತಾರೆಯೇ ಹೊರತು ನಿಜವಾದ ಅಭಿವೃದ್ಧಿಗಾಗಲ್ಲ. ಬಡತನದ ರೇಖೆಯ ಕೆಳಗಿರುವವರಿಗಾಗಿ 1 ರೂ. ಕೆ.ಜಿ. ಅಕ್ಕಿ ಯೋಜನೆ ಆರಂಭಿಸಿರುವುದು ಜನರನ್ನು ಸೋಂಬೇರಿಗಳನ್ನಾಗಿ ಮಾಡುತ್ತದೆಯೇನೋ ಎಂಬ ಅನುಮಾನ ನನಗೆ. ನಮ್ಮ ಕಾಲೇಜುಗಳು ಪದವೀಧರರನ್ನು ತಯಾರಿಸುವ ಕಾರ್ಖಾನೆಗಳಾಗಿವೆ. ಶಿಕ್ಷಣ ಪದ್ಧತಿಯಲ್ಲಿ ಕುಶಲತೆ ಬೆಳೆಸುವ ಕಲೆ ಬರಬೇಕು. ವಿಕೇಂದ್ರೀಕರಣದ ಕನಸು ನನಸಾಗಬೇಕಾದರೆ ಉತ್ತರ ಕರ್ನಾಟಕದ ಅದರಲ್ಲೂ ಹೈದರಾಬಾದ್ ಕರ್ನಾಟಕದ ಅಭಿವೃದ್ಧಿ ಆಗಲೇಬೇಕು. ರೈತರ ಮತ್ತು ಅಸಂಘಟಿತ ಕಾರ್ಮಿಕರ ಜೀವನ ಹಸನಾಗದೆ ಹೋದರೆ ಕರ್ನಾಟಕಕ್ಕೆ ಭವಿಷ್ಯವಿಲ್ಲ ಎಂದು ಡಾ. ವೂಡೆ ತಿಳಿಸಿದರು.

ಮತ್ತೋರ್ವ ಮುಖ್ಯ ಉಪನ್ಯಾಸಕ, ಕನ್ನಡ ಯುವಜನ ಸಂಘದ ಅಧ್ಯಕ್ಷ ಹಾಗೂ ಮಾಜಿ ಕಾರ್ಪೊರೇಟರ್ ಜಗದೀಶ್‌ರೆಡ್ಡಿ ಅವರು ರಾಜ್ಯದ ಪ್ರಾಮಾಣಿಕ ಮುಖ್ಯಮಂತ್ರಿಗಳಾಗಿದ್ದ ಕೆಂಗಲ್ ಹನುಮಂತಯ್ಯ ಮತ್ತು ವೀರೇಂದ್ರ ಪಾಟೀಲರನ್ನು ಅಧಿಕಾರದಿಂದ ಕೆಳಗಿಳಿಸಿದವರು ಅವರ ಪಕ್ಷದವರೇ. ಮತ್ತೊಬ್ಬ ಪ್ರಾಮಾಣಿಕ ಮುಖ್ಯಮಂತ್ರಿಯಾಗಿದ್ದ ನಿಜಲಿಂಗಪ್ಪನವರು ರಾಜಾಜಿನಗರದ ಒಂದು ರಸ್ತೆಯ ಸಾಲು ಸಾಲು ಮನೆಗಳ ಒಡೆಯರಾಗಿದ್ದಾರೆ ಎಂದು ನಮ್ಮ ಮುಖಂಡರೊಬ್ಬರೇ ಅಪಪ್ರಚಾರ ಮಾಡಿದರು ಎಂದು ನೋವಿನಿಂದ ಹೇಳಿದರು. ಭ್ರಷ್ಟಾಚಾರದ ಆರೋಪಕ್ಕೆ ಒಳಗಾಗಿದ್ದ ದೇವರಾಜ ಅರಸು ಅವರು ಹೇಳಿದ್ದು : 'ನಾನು ಅಲ್ಪಸಂಖ್ಯಾತನು. ಇತರ ಶಾಸಕರನ್ನು ಓಲೈಸಲು ಹಣ ವಸೂಲು ಮಾಡಲೇಬೇಕಾಗಿತ್ತು'. ಜನರಲ್ಲಿ ಜಾಗೃತಿ ಮೂಡುವವರೆಗೂ 60-70ರ ದಶಕದಲ್ಲಿದ್ದ ಎಸ್. ಕರಿಯಪ್ಪ ಮತ್ತು ಶಾಂತವೇರಿ ಗೋಪಾಲಗೌಡರಂತಹ ಪ್ರಾಮಾಣಿಕ ರಾಜಕಾರಣಿಗಳನ್ನು ಮತ್ತೆ ಕಾಣಲು ಸಾಧ್ಯವಿಲ್ಲ. ಇಂದು ಕನ್ನಡಕ್ಕೆ ಆಪತ್ತು ಬಂದಿದ್ದರೆ ಅದಕ್ಕೆ ಕನ್ನಡಿಗರೇ ಕಾರಣ. ಅ.ನ.ಕೃ ಮತ್ತು ಮ. ರಾಮಮೂರ್ತಿ ಅವರಂತಹ ಪ್ರಾಮಾಣಿಕ ನಾಯಕರ ಬದಲು ರೋಲ್ ಕಾಲ್ ಮಾಡುವ ಬೋಗಸ್ ನಾಯಕರೇ ಹೆಚ್ಚಾಗಿದ್ದಾರೆ ಎಂದು ವ್ಯಂಗ್ಯವಾಡಿದರು. 49 ವರ್ಷಗಳಿಂದ ರಚನಾತ್ಮಕವಾಗಿ ಕನ್ನಡ ಪರ ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿರುವ ಕನ್ನಡ ಯುವಜನ ಸಂಘದ ಚಟುವಟಿಕೆಗಳನ್ನು ವಿವರಿಸಿದರು. ರಾಜಕೀಯ ನಾಯಕರು ತಮ್ಮ ಸ್ವಾರ್ಥಕ್ಕಾಗಿ ಕೊಡುವ ಸೀರೆ ಇತ್ಯಾದಿಗಳನ್ನು ತೆಗೆದುಕೊಳ್ಳದೆ ಸ್ವಾಭಿಮಾನ ಬೆಳೆಸಿಕೊಳ್ಳಿ ಎಂದು ಮಹಿಳೆಯರಿಗೆ ಕಿವಿ ಮಾತು ಹೇಳಿದರು.

ಚಿಂತನ ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಸ್ವಾಭಿಮಾನಿ ಕರ್ನಾಟಕ ವೇದಿಕೆ ಅಧ್ಯಕ್ಷ ದ್ವಾರನಕುಂಟೆ ಪಾತಣ್ಣ ಅವರು ಅಪಾರ ತಪರಾ ಹಣ ಖರ್ಚು ಮಾಡುವುದನ್ನೇ ಕನ್ನಡ ಅಭಿವೃದ್ಧಿ ಎಂದು ತಿಳಿದುಕೊಂಡಿರುವ ಕನ್ನಡ ಅಭಿವೃದ್ಧಿ ಪ್ರಾಧಿಕಾರವನ್ನು ತರಾಟೆಗೆ ತೆಗೆದುಕೊಂಡರು. ಕನ್ನಡಕ್ಕೆ ಯಾವಾಗ ಕುತ್ತು ಬಂದರೂ ಮೊದಲು ಸಿಡಿದೇಳುವುದು ಪ್ರಾಮಾಣಿಕ ಕನ್ನಡ ಚಳವಳಿಗಾರರೇ ಹೊರತು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅಥವಾ ಇನ್ನಾವುದೇ ಸಂಸ್ಥೆ ಅಲ್ಲ ಎಂದು ಸ್ಪಷ್ಟಪಡಿಸಿದರು.

ನಳಿನಿ ಮಹಾದೇವಸ್ವಾಮಿ ಅವರ ವಂದನಾರ್ಪಣೆಯೊಂದಿಗೆ ಗೋಷ್ಠಿ ಮುಕ್ತಾಯವಾಯಿತು. ಹೆಬ್ಬಗೋಡಿ ಗೋಪಾಲ್ ಅವರು ಅತಿಥಿಗಳಿಗೆ ಮಾಲಾರ್ಪಣೆ ಮಾಡಿ ಗೌರವಿಸಿದರು.

ಸ್ಲಿಮ್

ಪ್ರೀತಿ ಹನಿ

Slim ಆಗಿ
ಕಾಣಬೇಕೆಂದು
ಅನ್ನಸಿದರೆ
ದಢೂತಿಯ
ಪಕ್ಕ
ನಿಲ್ಲುವುದು.

ಸುಂದರ

ಸುಂದರವಾಗಿ
ಕಾಣಲು
ಕುರೂಪಿಯ
ಪಕ್ಕ
ನಿಲ್ಲುವುದು.

- ದ್ವಾರನಕುಂಟೆ ಪಾತಣ್ಣ

Printed, Published & Owned by N.S. Mahesh Kumar, Published from 163, T.D. Lane, Cottonpet, Bangalore - 560 053. Printed at: Abhimaani Publications Limited, 2/4, Dr. Rajkumar Road, Rajajinagar, Bangalore - 560 010. Editor: N.S. Mahesh Kumar Mobile: 9845112327, 9844320121 Volume - 9 Issue - 002

ವಿಜಯ ಕರ್ನಾಟಕ
ಶುಕ್ರವಾರ 17 ಮೇ 2013, ಚಿತ್ರದುರ್ಗ | III

ಸುದ್ದಿ

ವಿಕ ಚಿತ್ರಲೋಕ

ಆಂಧ್ರ ಪ್ರದೇಶದ ವಲಸೆ ಗ್ರಾಮದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನು ಮೆರವಣಿಗೆ ಮೂಲಕ ಕರೆ ತರುತ್ತಿರುವುದು.

ಶುಕ್ರವಾರ
17ನೇ ಮೇ 2013
D*
3

ಪ್ರಜಾವಾಣಿ
ಚಿತ್ರದುರ್ಗ ಜಿಲ್ಲೆ

ಸಮ್ಮೇಳನ

ಧರ್ಮಪುರ ಸಮೀಪದ ವಲಸೆಯಲ್ಲಿ ಗುರುವಾರ ಹಮ್ಮಿಕೊಂಡಿದ್ದ ಆಂಧ್ರ ಗಡಿನಾಡ ಸಾಹಿತ್ಯ ಸಮ್ಮೇಳನದಲ್ಲಿ ಸಮ್ಮೇಳನಾಧ್ಯಕ್ಷ ಡಾ.ಮೀರಾಸಾಬಿಹಳ್ಳಿ ಶಿವಣ್ಣ ಮಾತನಾಡಿದರು.

ಸಮ್ಮೇಳನದಲ್ಲಿ ಡಾ.ಮೀರಾಸಾಬಿಹಳ್ಳಿ ಶಿವಣ್ಣ ಸಲಹೆ

ಭಾಷೆ– ಸಂಸ್ಕೃತಿ ರಕ್ಷಣೆಗೆ ನೆರವು ಅಗತ್ಯ

ಪ್ರಜಾವಾಣಿ ವಾರ್ತೆ

ಧರ್ಮಪುರ: ಗಡಿನಾಡಿನಲ್ಲಿ ಕನ್ನಡ ಭಾಷೆ ಮತ್ತು ಸಂಸ್ಕೃತಿ ರಕ್ಷಣೆಗೆ ಸರ್ಕಾರದ ನೆರವು ಅಗತ್ಯ ಎಂದು ಆಂಧ್ರ ಗಡಿನಾಡ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷ ಡಾ.ಮೀರಾಸಾಬಿಹಳ್ಳಿ ಶಿವಣ್ಣ ಅಭಿಪ್ರಾಯಪಟ್ಟರು.

ಸಮೀಪದ ವಲಸೆ ಗ್ರಾಮದಲ್ಲಿ ಆಂಧ್ರ ಸಾಹಿತ್ಯ ಪರಿಷತ್ ಗುರುವಾರ ಹಮ್ಮಿಕೊಂಡಿದ್ದ ಆಂಧ್ರಗಡಿನಾಡ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅವರು ಮಾತನಾಡಿದರು.

ಕರ್ನಾಟಕವನ್ನು ತೆಲುಗು, ತಮಿಳು, ಮರಾಠಿ ಮತ್ತು ಮಲೆಯಾಳಿ ಪ್ರಾಂತ್ಯಗಳು ಆವರಿಸಿಕೊಂಡಿವೆ. ಭಾಷಾವಾರು ಪ್ರಾಂತ್ಯಗಳು ವಿಂಗಡಣೆಯಾಗುವಾಗ ಕನ್ನಡ ಮಾತನಾಡುವ ಪ್ರದೇಶಗಳು ಬೇರೆ ಬೇರೆ ರಾಜ್ಯಗಳೊಳಗೆ ಸೇರಿ ಹೋಗಿದ್ದು, ಎಷ್ಟೇ ಹೋರಾಟಗಳು ನಡೆಸಿದರೂ ಕಳೆದುಕೊಂಡ ಆ ಪ್ರದೇಶಗಳನ್ನು ಮರಳಿ ಪಡೆಯಲು ಸಾಧ್ಯವಾಗಿಲ್ಲ. ಸರ್ಕಾರದ ನಿರ್ಲಕ್ಷ್ಯದಿಂದಾಗಿ ಗಡಿನಾಡು ಕನ್ನಡಿಗರ ಪರಿಸ್ಥಿತಿ ತ್ರಿಶಂಕು ಸ್ಥಿತಿಯಂತಾಗಿದೆ ಎಂದರು.

ಕರ್ನಾಟಕ – ಆಂಧ್ರ ಸರ್ಕಾರಗಳು ಒಟ್ಟಾಗಿ ಕೂತು ಶಾಲೆಗಳ ಪ್ರಾರಂಭಕ್ಕೆ ಇರುವ ಸಮಸ್ಯೆಗಳ ಬಗ್ಗೆ ಚರ್ಚಿಸಬೇಕು. ಎರಡೂ ರಾಜ್ಯಗಳು ಎರಡೂ ಪ್ರದೇಶಗಳ ವಿದ್ಯಾರ್ಥಿಗಳ ಅಧ್ಯಯನಕ್ಕೆ ಸಹಾಯಕವಾಗುವಂತಹ ಮೀಸಲಾತಿ ಸೌಲಭ್ಯ ಕಲ್ಪಿಸಬೇಕು ಎಂದು ಆಗ್ರಹಿಸಿದರು.

ಧರ್ಮಪುರ ಸಮೀಪದ ವಲಸೆಯಲ್ಲಿ ಆಂಧ್ರ ಗಡಿನಾಡ ಕನ್ನಡ ಸಾಹಿತ್ಯ ಪರಿಷತ್ ಆಶ್ರಯದಲ್ಲಿ ಗುರುವಾರ ಹಮ್ಮಿಕೊಂಡಿದ್ದ ತೃತೀಯ ಗಡಿನಾಡ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಶಿಕ್ಷಣ ತಜ್ಞ ಡಾ.ವೂಡೇ ಪಿ ಕೃಷ್ಣ ಉದ್ಘಾಟಿಸಿದರು.

ಕರ್ನಾಟಕಕ್ಕೆ ಹೋಲಿಸಿದರೆ ಆಂಧ್ರದಲ್ಲಿ ಜಾನಪದ ಶ್ರೀಮಂತವಾಗಿದೆ. ಅಮರಾಪುರ ಸಮೀಪದ ಕ್ಯಾತಗಾನಹಳ್ಳಿಯ ಗಿರಿಯಯ್ಯ ಅಸಾಧಾರಣ ಕತೆಗಾರ. ಅದಕ್ಕಾಗಿ ಹಿರಿಯ ಜೀವಗಳು ಮರೆಯಾಗುವ ಮುನ್ನ ಅವುಗಳ ಸಂಗ್ರಹಣಾ ಕಾರ್ಯವೂ ನಡೆಯಬೇಕು ಎಂದರು.

ಡಾ.ಬಿ.ರಾಜಶೇಖರಪ್ಪ, ಡಾ.ಚಿಕ್ಕಣ್ಣ ಯಣ್ಣೆಕಟ್ಟೆ, ಪತ್ರಕರ್ತ ಉಜ್ಜನಪ್ಪ, ತಿಪ್ಪಣ್ಣ ಮರಿಕುಂಟೆ, ಆಂಧ್ರಗಡಿನಾಡ ಕನ್ನಡ ಪರಿಷತ್ ಅಧ್ಯಕ್ಷ ಪ್ರೊ.ವಿ. ಅಗ್ರಹಾರಂ ಎಚ್.ಬಿ. ಶಿವಕುಮಾರ್, ಡಾ.ವೂಡೇ ಪಿ ಕೃಷ್ಣ, ರಾಮಚಂದ್ರಪ್ಪ ಡಾ.ಮ.ಲ.ನ. ಮೂರ್ತಿ, ಮತ್ತಿತರರು ಉಪಸ್ಥಿತರಿದ್ದರು.

ಧರ್ಮಪುರ ಸಮೀಪದ ವಲಸೆ ಗ್ರಾಮದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಆಂಧ್ರಗಡಿನಾಡ ಕನ್ನಡ ಸಾಹಿತ್ಯ ಸಮ್ಮೇಳನದ ಮೆರವಣಿಗೆಯಲ್ಲಿ ಭಾಗವಹಿಸಿದ್ದ ವಿವಿಧ ಜಾನಪದ ಕಲಾ ತಂಡ.

‘ಗಡಿನಾಡ ಕನ್ನಡಿಗರು ಅನಾಥರಲ್ಲ’

ಆಂಧ್ರಗಡಿನಾಡ ಕನ್ನಡಿಗರು ಅನಾಥರಲ್ಲ ಎಂದು ಆಂಧ್ರ ಶಿಕ್ಷಣ ತಜ್ಞ ಡಾ.ವೂಡೇ ಪಿ ಕೃಷ್ಣ ಹೇಳಿದರು.

ಸಮೀಪದ ವಲಸೆಯ ಜಿಲ್ಲಾ ಪರಿಷತ್ ಉನ್ನತ ಪಾಠಶಾಲೆಯ ಆವರಣದಲ್ಲಿ ಗುರುವಾರ ಆಂಧ್ರ ಗಡಿನಾಡ ಕನ್ನಡ ಸಾಹಿತ್ಯ ಪರಿಷತ್ ಹಮ್ಮಿಕೊಂಡಿದ್ದ ತೃತೀಯ ಆಂಧ್ರ ಗಡಿನಾಡ ಕನ್ನಡ ಸಾಹಿತ್ಯ ಸಮ್ಮೇಳನದ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕರ್ನೂಲ್ ಜಿಲ್ಲೆಯಲ್ಲಿ ಇಂದಿಗೂ 41 ಕನ್ನಡ ಶಾಲೆಗಳಿವೆ. ಅದೇ ರೀತಿ ಮಡಕಶಿರಾ ತಾಲ್ಲೂಕಿನ ಗಡಿ ಪ್ರದೇಶಗಳಲ್ಲಿ ಎರಡು ಸರ್ಕಾರಗಳ ಸಹಕಾರದೊಂದಿಗೆ ಕನ್ನಡ ಶಾಲೆಗಳು ಆರಂಭವಾಗಬೇಕು. ಕನ್ನಡಿಗರು ಸಂಘಟಿತರಾಗಬೇಕು. ಕೊನೆ ಪಕ್ಷ ಸಭೆ ಸಮಾರಂಭಗಳಲ್ಲಾದರೂ ಸಾಂಕೇತಿಕವಾಗಿ ಸಂಘಟಿತರಾಗಲು ತಿಳಿಸಿದರು.

ಆಂಧ್ರ ಗಡಿನಾಡ ಕನ್ನಡ ಸಾಹಿತ್ಯ ಪರಿಷತ್‌ನ ಅಧ್ಯಕ್ಷ ವಿ.ಅಗ್ರಹಾರಂ ಎಚ್.ಬಿ.ಶಿವಕುಮಾರ್ ಮಾತನಾಡಿ, ಮುಚ್ಚಿರುವ ಶಾಲೆಗಳನ್ನು ಮತ್ತೆ ಪುನಃ ಆರಂಭಿಸಬೇಕು. ಆಂಧ್ರ ಮತ್ತು ಕರ್ನಾಟಕ ಸರ್ಕಾರಗಳು ಉದ್ಯೋಗ ಮೀಸಲಾತಿ ನೀಡಬೇಕು. ಆಂಧ್ರದಲ್ಲಿ ಕನ್ನಡ ಭವನಗಳ ನಿರ್ಮಾಣಕ್ಕೆ ಸ್ಥಳ ಮತ್ತು ಅನುದಾನ ನೀಡಬೇಕು ಎಂದರು.

ವೇದಿಕೆಯಲ್ಲಿ ಸಾಹಿತ್ಯ ಪರಿಷತ್ ನಿಕಟಪೂರ್ವ ಅಧ್ಯಕ್ಷ ರಾಮಚಂದ್ರಪ್ಪ, ಪ್ರೊ.ಹನುಮಂತರಾಯ, ಸಂತೋಷ್, ಜಯದೇವಮೂರ್ತಿ, ಜಯಶಂಕರ್, ಹನುಮಂತೇಗೌಡ, ಡಾ.ಮುದ್ದವೀರಪ್ಪ, ಡಾ.ನಾಗಭೂಷಣ್, ಡಾ.ಪುಲ್ಲಿಕುಂಟೆ ರಾಜ್, ರಾಮಲಿಂಗೇಶ್ವರಪ್ಪ ಮತ್ತಿತರರು ಉಪಸ್ಥಿತರಿದ್ದರು.

ಶಿಕ್ಷಕ ಜುಂಜಪ್ಪ ನಾಡಗೀತೆ ಹಾಡಿದರು. ನಾಗಭೂಷಣ್ ಸ್ವಾಗತಿಸಿದರು. ಹನುಮಂತರಾಯಪ್ಪ ವಂದಿಸಿದರು.

ನಗರದ 11 ಭಾಗದಲ್ಲಿ ಶೋಭಾ ಯಾತ್ರೆ | ಗಮನ ಸೆಳೆದ ಜಾನಪದ ಕಲಾ ತಂಡಗಳು | ದೇಶ ಪ್ರೇಮ ಬಿಂಬಿಸಿದ ನೃತ್ಯ ರೂಪಕ

ಎಲ್ಲೆಡೆ ಮೊಳಗಿದ ರಾಷ್ಟ್ರಾಭಿಮಾನದ ಉದ್ಘೋಷ

ಬೆಂಗಳೂರು: ಸ್ವಾಮಿ ವಿವೇಕಾನಂದರ 150ನೇ ಜನ್ಮ ವರ್ಷಾಚರಣೆ ಹಿನ್ನೆಲೆಯಲ್ಲಿ ನಗರದೆಲ್ಲೆಡೆ ವಿವೇಕಾನಂದರ ನಾಮಸ್ಮರಣೆಯೊಂದಿಗೆ ರಾಷ್ಟ್ರಾಭಿಮಾನದ ಉದ್ಘೋಷಗಳು ಮೊಳಗಿದವು.

ರಾಷ್ಟ್ರಭಕ್ತಿಯ ಪ್ರತೀಕವಾದ ವೀರ ಸನ್ಯಾಸಿ ವಿವೇಕಾನಂದರಂತೆ ಪೋಷಾಕು ತೊಟ್ಟ ಮಕ್ಕಳು, ಬೈಕ್ ರ್‍ಯಾಲಿ, ವಿವೇಕಾನಂದರ ಸಂದೇಶ ಸಾರಿದ ಶೋಭಾಯಾತ್ರೆ, ಜಾನಪದ ಕಲಾತಂಡಗಳ ನೃತ್ಯರೂಪಕಗಳು ದೇಶಪ್ರೇಮವನ್ನು ಬಿಂಬಿಸಿದವು.

ಸ್ವಾಮಿ ವಿವೇಕಾನಂದರ 150ನೇ ಜನ್ಮ ವರ್ಷಾಚರಣೆ ಸಮಿತಿ ವತಿಯಿಂದ ನಗರದ 11 ಭಾಗದಲ್ಲಿ ಶೋಭಾಯಾತ್ರೆ ಹಮ್ಮಿಕೊಳ್ಳಲಾಗಿತ್ತು. ಈ ಶೋಭಾಯಾತ್ರೆಗೆ ಶೋಭೆ ತಂದುಕೊಟ್ಟಿದ್ದ ಬಾಲ ವಿವೇಕಾನಂದರು ಎಲ್ಲರ ಗಮನ ಸೆಳೆದರು.

ಇದರೊಂದಿಗೆ ವಿವೇಕಾನಂದರ ಸಂದೇಶ ಸಾರುವ ಫಲಕಗಳನ್ನು ಹಿಡಿದ ಈ ಪುಟ್ಟ ವಿವೇಕಾನಂದರ ದೊಡ್ಡ ದಂಡು ಶೋಭಾಯಾತ್ರೆಯುದ್ದಕ್ಕೂ ವಿವೇಕಾನಂದರಿಗೆ ಜೈಘೋಷ ಕೂಗಿ ರಾಷ್ಟ್ರಭಕ್ತಿಯ ಠೇಂಕಾರ ಮೊಳಗಿಸಿದರು.

ಕೆ.ಆರ್. ಪುರದ ಮೇಡಹಳ್ಳಿಯಿಂದ ಬೆಳಗ್ಗೆ 8ಗಂಟೆಗೆ ಆರಂಭವಾದ ಮೊದಲ ಶೋಭಾಯಾತ್ರೆ ಬೆಳಗ್ಗೆ 10 ಗಂಟೆಗೆ ಇಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಬಳಿ ಸಮಾವೇಶಗೊಂಡಿತು. ಬಳಿಕ ನಡೆದ ಸಭಾಕಾರ್ಯಕ್ರಮದಲ್ಲಿ ಶ್ರೀಧರಸ್ವಾಮಿ ಹಾಗೂ ಸಾಧು ರಂಗರಾಜನ್ ಉಪಸ್ಥಿತರಿದ್ದರು.

ಇತ್ತ ಚಿಕ್ಕಲಾಲ್‌ಬಾಗ್‌ನಿಂದ ಬೆಳಗ್ಗೆ 10 ಗಂಟೆಗೆ ಆರಂಭವಾದ ಶೋಭಾಯಾತ್ರೆ ಮಧ್ಯಾಹ್ನ 12.30 ರ ವೇಳೆಗೆ ಬಳೇಪೇಟೆ ವೃತ್ತದಲ್ಲಿ ಸಮಾವೇಶಗೊಂಡಿತು. ಬಳಿಕ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಅವರು ವಿವೇಕಾನಂದರ ಪ್ರತಿಮೆ ಅನಾವರಣಗೊಳಿಸಿದರು. ಆರೆಸ್ಸೆಸ್ ಕರ್ನಾಟಕ ದಕ್ಷಿಣ ಪ್ರಾಂತ ಕಾರ್ಯವಾಹ ನಾ.ತಿಪ್ಪೇಸ್ವಾಮಿ ಪಾಲ್ಗೊಂಡಿದ್ದರು.

ಇನ್ನು ಕೋಡಿಹಳ್ಳಿ, ಇಂದಿರಾನಗರ 2ನೇ ಹಂತದಿಂದ ಬೆಳಗ್ಗೆ 10ಕ್ಕೆ ಆರಂಭವಾದ ಶೋಭಾಯಾತ್ರೆ 11.30 ರ ವೇಳೆಗೆ ಬಿಎಂಸಿ ವೃತ್ತದ ಬಳಿ ಸಮಾಗಮಗೊಂಡಿತು. ಅಲ್ಲದೆ, ಒಂದೆಡೆ ಲಿಂಗರಾಜಪುರ, ಕಾಚರಕನಹಳ್ಳಿ, ಶ್ರೀರಾಮಮಂದಿರ ಮೂಲಕ ಸಾಗಿದ ಮತ್ತೊಂದು ಶೋಭಾಯಾತ್ರೆ ಬೆಳಗ್ಗೆ 11 ಕ್ಕೆ ಲಿಂಗರಾಜಪುರ ಆಟದ ಮೈದಾನದಲ್ಲಿ ಸಂಗಮಗೊಂಡಿತು. ಬಿಜೆಪಿ ಪ್ರಧಾನ ಕಾರ್ಯದರ್ಶಿ ಸಂತೋಷ್ ಅವರು ವಿವೇಕಾನಂದರಿಗೆ ನಮನ ಸಲ್ಲಿಸಿದರು. ಅಂತೆಯೇ ವಿಜಯನಗರ ಸಮೀಪದ ಶನಿಮಹಾತ್ಮ ದೇವಸ್ಥಾನದಿಂದ ಹೊರಟ ಶೋಭಾಯಾತ್ರೆಯು ಇಲ್ಲಿನ ಸಿಪಿಡಬ್ಲ್ಯೂಡಿ ಹಿಂಭಾಗ ಬೆಳಗ್ಗೆ ಸಮಾವೇಶಗೊಂಡಿತು. ಆದಿಚುಂಚನಗಿರಿ ಮಠದ ಶ್ರೀಸೌಮ್ಯನಾಥ ಸ್ವಾಮೀಜಿಯ ಸಾನಿಧ್ಯದಲ್ಲಿ ನೆರವೇರಿದ ಸಭಾ ಕಾರ್ಯಕ್ರಮದಲ್ಲಿ ಜಿ.ಆರ್. ಜಗದೀಶ್ ಪಾಲ್ಗೊಂಡಿದ್ದರು.

ಇದಲ್ಲದೆ, ದಾಸರಹಳ್ಳಿಯ ಚಿಕ್ಕಬಾಣಾವರ ವೃತ್ತದಿಂದ ಬಾಗಲಗುಂಟೆವರೆಗೂ ನಡೆದ ಶೋಭಾಯಾತ್ರೆ ನಂತರ ರಾಜ್ಯ ಯುವ ವಿಭಾಗ ಸಂಚಾಲಕ ಚಕ್ರವರ್ತಿ ಸೂಲಿಬೆಲೆ ಹಾಗೂ ನಿರ್ದೇಶಕ ನಾಗಾಭರಣ ಅವರು ಸಭಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಜತೆಗೆ ಆರ್.ಟಿ. ನಗರದ ರಾಧಾಕೃಷ್ಣ ಚಿತ್ರಮಂದಿರದಿಂದ ನಡೆದ ಶೋಭಾಯಾತ್ರೆಯು ಎಚ್‌ಎಂಟಿ ಮೈದಾನದಲ್ಲಿ ಸಮಾವೇಶಗೊಂಡಿರು. ಬಿ.ಎಸ್. ಹೆಗ್ಡೆ ಮತ್ತು ಗುರುರಾಜ ಕರ್ಜಗಿ ಅವರು ಭಾಗವಹಿಸಿದ್ದರು.

ಇದರೊಂದಿಗೆ ಜಯನಗರದ ಶಾಲಿನಿ ಗ್ರೌಂಡ್ ಮೂಲಕ ಸಾಗಿದ ಶೋಭಾಯಾತ್ರೆ ಚಂದ್ರಗುಪ್ತ ಆಟದ ಮೈದಾನದಲ್ಲಿ ಸಂಗಮವಾಯಿತು. ಸಮಾರಂಭದಲ್ಲಿ ಆರೆಸ್ಸೆಸ್ ದಕ್ಷಿಣ ಪ್ರಾಂತ ಪ್ರಚಾರಕ್ ಮುಕುಂದ, ನಿವೃತ್ತ ಡಿಜಿಪಿ ಶಂಕರ ಬಿದರಿ ಸೇರಿದಂತೆ ಮತ್ತಿತರ ಗಣ್ಯರು ಪಾಲ್ಗೊಂಡಿದ್ದರು. ಉತ್ತರಹಳ್ಳಿಯ ಗಿರಿನಗರದಲ್ಲಿ ನಡೆದ ಶೋಭಾಯಾತ್ರೆ ಬಳಿಕ ಜರುಗಿದ ಸಭಾ ಕಾರ್ಯಕ್ರಮದಲ್ಲಿ ವಿ. ಮಂಜುನಾಥ್ ಹಾಗೂ ಸರ್ಜಾಪುರ ಬಳಿಯ ನಡೆದ ಶೋಭಾಯಾತ್ರೆ ಮತ್ತು ವೇದಿಕೆ ಕಾರ್ಯಕ್ರಮದಲ್ಲಿ ಆರೆಸ್ಸೆಸ್ ಕರ್ನಾಟಕ ದಕ್ಷಿಣ ಪ್ರಾಂತ ಕಾರ್ಯವಾಹ ನಾ.ತಿಪ್ಪೇಸ್ವಾಮಿ ಹಾಗೂ ಶಂಕರಪ್ಪ ಪಾಲ್ಗೊಂಡಿದ್ದರು.

ಇನ್ನು ರಾಜಾಜಿನಗರ ಬಳಿಯ ಗಾಯತ್ರಿ ಉದ್ಯಾನವನ ಹಾಗೂ ಮಲ್ಲೇಶ್ವರ 18ನೇ ಅಡ್ಡರಸ್ತೆಯಲ್ಲಿನ ಆಟದ ಮೈದಾನದಿಂದ ತೆರಳಿದ ಎರಡು ಪ್ರತ್ಯೇಕ ಶೋಭಾಯಾತ್ರೆಗಳು ಚಂದ್ರಶೇಖರ್ ಆಜಾದ್ ಮೈದಾನದಲ್ಲಿ ಒಂದು ಸೇರಿದವು. ಬಳಿಕ ವಿವೇಕಾನಂದರ ಕುರಿತು ವಿಶ್ವ ಹಿಂದು ಪರಿಷತ್ ಪ್ರಾಂತ ಕಾರ್ಯದರ್ಶಿ ಟಿ.ಎ.ಪಿ. ಶೆಣೈ, ಅಂತಾರಾಷ್ಟ್ರೀಯ ಕ್ರೀಡಾಪಟು ಅರ್ಜುನ್ ದೇವಯ್ಯ, ಶೇಷಾದ್ರಿಪುರ ಶಿಕ್ಷಣ ಸಂಸ್ಥೆ ಪ್ರಧಾನ ಕಾರ್ಯದರ್ಶಿ ವೂಡೆ. ಪಿ. ಕೃಷ್ಣ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಉದ್ಘಾಟನೆ
ಎಚ್‌ಎಎಲ್ ವಿದ್ಯಾಸಂಸ್ಥೆ ಹಮ್ಮಿಕೊಂಡಿದ್ದ ಸ್ವಾಮಿ ವಿವೇಕಾನಂದರ 150ನೇ ಜನ್ಮದಿನಾಚರಣೆಯನ್ನು ಕೇಂದ್ರೀಯ ಕನ್ನಡ ಸಂಘದ ಅಧ್ಯಕ್ಷ ವಿಜಯಕುಮಾರ್ ಉದ್ಘಾಟಿಸಿದರು. ಗೀತಾ ಹಾಗೂ ಪ್ರಧಾನ ಕಾರ್ಯದರ್ಶಿ ತ. ಜಗದೀಶಚಂದ್ರ ಉಪಸ್ಥಿತರಿದ್ದರು.

ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಏರ್ಪಡಿಸಿದ್ದ ಸ್ವಾಮಿ ವಿವೇಕಾನಂದರ 150ನೇ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಕಲಾವಿದರು ನಡೆಸಿಕೊಟ್ಟ ಡೊಳ್ಳು ಕುಣಿತ ಪ್ರದರ್ಶನ ಜನ ಮೆಚ್ಚುಗೆಗೆ ಪಾತ್ರವಾಯಿತು.



ಸ್ವಾಮಿ ವಿವೇಕಾನಂದರ 150 ಜನ್ಮ ವರ್ಷಾಚರಣೆ

ವಿಹಿಂಪ ಪ್ರಾಂತ ಕಾರ್ಯದರ್ಶಿ ಟಿ.ಎ.ಪಿ. ಶೆಣೈ ಅಭಿಮತ

ಅಹಂಕಾರ ಜೀರ್ಣಿಸಿಕೊಂಡಿದ್ದ ಚೇತನ

ಬೆಂಗಳೂರು: ವಿದೇಶಿ ಶಿಷ್ಯರಿಗೂ ಭಾರತದ ಮೇಲೆ ಪ್ರೀತಿ ಹುಟ್ಟಿಸಿದ ಸ್ವಾಮಿ ವಿವೇಕಾನಂದರು ಅಹಂಕಾರವನ್ನು ಜೀರ್ಣಿಸಿಕೊಂಡಿದ್ದ ದಿವ್ಯ ಚೇತನ ಎಂದು ವಿಶ್ವ ಹಿಂದು ಪರಿಷತ್ ಪ್ರಾಂತ ಕಾರ್ಯದರ್ಶಿ ಟಿ.ಎ.ಪಿ.ಶೆಣೈ ಹೇಳಿದರು.

ಸ್ವಾಮಿ ವಿವೇಕಾನಂದರ 150ನೇ ಜನ್ಮ ವರ್ಷಾಚರಣೆ ಸಮಿತಿ ಮಲ್ಲೇಶ್ವರಂನ ಆಜಾದ್ ಮೈದಾನದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಭಾರತೀಯರು ಪಾಶ್ಚಾತ್ಯ ಸಂಸ್ಕೃತಿಗೆ ಒಗ್ಗಿಕೊಂಡು ಜುಟ್ಟು-ಜನಿವಾರ ಕಳಚಿ ಮಾಂಸ-ಮದ್ಯ ಸೇವನೆಯನ್ನೇ ಸ್ವಾತಂತ್ರ್ಯ ಎಂದುಕೊಂಡಿದ್ದ ವೇಳೆ ಅಮೂರ್ತ ವಿಚಾರಗಳಿಗೆ ಮೂರ್ತರೂಪ ಕೊಟ್ಟು ಅರಿವು ಮೂಡಿಸಿದ್ದು ವಿವೇಕಾನಂದರ ವೈಶಿಷ್ಟ್ಯತೆ ಎಂದರು.

ಭಾರತವನ್ನು ಹಾಸ್ಯದ ವಸ್ತುವನ್ನಾಗಿ ಕಾಣುತ್ತಿದ್ದ ವಿದೇಶಿಗರಿಗೆ ಚಿಕಾಗೋದ ಸರ್ವಧರ್ಮ ಭಾಷಣದ ಮೂಲಕ ತಕ್ಕ ಉತ್ತರ ನೀಡಿದ ವಿವೇಕಾನಂದರು ವಿದೇಶಿಗರೇ ಶಿಷ್ಯತ್ವ ನೀಡಿದರು. ಅಷ್ಟೇ ಅಲ್ಲದೆ, ಭಾರತ ಮಾತೆ ಮೇಲೆ ಆ ಶಿಷ್ಯರಲ್ಲೂ ಭಕ್ತಿ ಮೂಡಿಸಿದ ರಾಷ್ಟ್ರಭಕ್ತರು ಎಂದು ಬಣ್ಣಿಸಿದರು.

ತನ್ನ ಕಪಾಟಿನಲ್ಲಿಡುವಷ್ಟು ಜ್ಞಾನದ ಅಲ್ಪ ಪುಸ್ತಕಗಳೂ ಭಾರತದಲ್ಲಿಲ್ಲ ಎಂದು ಗೇಲಿ ಮಾಡಿದ್ದ ಮೆಕಾಲೆ ಒಂದೆಡೆಯಾದರೆ, ಇಂಗ್ಲೆಂಡಿನ ವಿದ್ವಾಂಸರ ಜ್ಞಾನವನ್ನು ಮೂಟೆಕಟ್ಟಿ ತಕ್ಕಡಿಯಲ್ಲಿಟ್ಟು ತೂಗಿದರೂ ವಿವೇಕಾನಂದರಿಗೆ ಸರಿಸಮವಾಗಲು ಸಾಧ್ಯವಿಲ್ಲ ಎಂಬ ಮತ್ತೊಂದು ಮಾತೂ ವಿವೇಕಾನಂದರ ಬಗ್ಗೆ ಆಡಿದ್ದುಂಟು. ಅರಿಸ್ಟಾಟಲ್, ಪ್ಲೇಟೋರಂತಹವರಿಗೂ ಭಾರತವೇ ಸ್ಫೂರ್ತಿ ಎಂದು ವಿವೇಕಾನಂದರು ಸಾರಿ ಹೇಳಿದ್ದರು.

ಯುವಕರಿಂದ ನವ ಭಾರತ ನಿರ್ಮಾಣ

ಸ್ವಾಮಿ ವಿವೇಕಾನಂದರು ಯುವಶಕ್ತಿಯಲ್ಲಿ ಅತ್ಯಂತ ವಿಶ್ವಾಸವಿಟ್ಟಿದ್ದರು. ಕಬ್ಬಿಣದಂತಹ ಯುವಕರಿಂದ ದೇಶ ಮತ್ತು ಸಂಸ್ಕೃತಿಯ ಪುನರುತ್ಥಾನದ ಸಂಕಲ್ಪ ಮಾಡಿದ್ದರು. ಅವರ ಆಶಯದಂತೆ ಜಗತ್ತಿನ ಎಲ್ಲಾ ದೇಶದಲ್ಲೂ ಮುದುಕರು ತುಂಬಿರುತ್ತಾರೆ. ಭಾರತದಲ್ಲಿ 80 ಕೋಟಿ ತರುಣರು ಇರುತ್ತಾರೆ ಎಂದು ಅಭಿಪ್ರಾಯಪಟ್ಟರು.

ದರಿದ್ರದೇವೋ ಭವ

ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ ಪ್ರಧಾನ ಕಾರ್ಯದರ್ಶಿ ವೂಡೆ. ಪಿ. ಕೃಷ್ಣ ಮಾತನಾಡಿ, ಮಾತಾ, ಪಿತ, ಆಚಾರ್ಯರನ್ನು ದೇವರಂತೆ ಕಾಣಲು ಹೇಳಿದ ಮಹಾಸಂಸ್ಕೃತಿಯ ಪ್ರತಿಫಲ ರೂಪವಾದ ವಿವೇಕಾನಂದರು ರಾಷ್ಟ್ರನಿರ್ಮಾಣಕ್ಕಾಗಿ ದರಿದ್ರರು, ಪಾಪಿಗಳು ಹಾಗೂ ಮೂರ್ಖರನ್ನು ಉದ್ಧಾರ ಮಾಡುವ ಸಂದೇಶ ರವಾನಿಸಿದ ಆದರ್ಶ ಪುರುಷ ಎಂದರು.

ಆತ್ಮವಿಶ್ವಾಸ ತುಂಬಿದ ಆತ್ಮಜ್ಞಾನಿ

ವಿವೇಕಾನಂದರಿಗಿಂತ ಮತ್ತೊಂದು ಆದರ್ಶ ಇಂದಿನ ಪೀಳಿಗೆಗೆ ಸಿಗಲು ಸಾಧ್ಯವಿಲ್ಲ, ಕಾಯಾ, ವಾಚಾ, ಮನಸಾ ದ್ವಂದ್ವವಿಲ್ಲದ ಚಾರಿತ್ರ್ಯ ಅವರದ್ದಾಗಿತ್ತು ಎಂದು ಕೊಂಡಾಡಿದರು.

ಕಾನೂನು ಸಚಿವ ಎಸ್.ಸುರೇಶ್‌ಕುಮಾರ್, ಶಿಕ್ಷಣ ಇಲಾಖೆ ನಿವೃತ್ತ ಅಧಿಕಾರಿ ನೀಲಯ್ಯ, ರಾಷ್ಟ್ರೀಯ ಸ್ವಯಂಸೇವಕ ಸಂಘ ಸುಬ್ರಹ್ಮಣ್ಯನಗರ ಸಂಚಾಲಕ್ ಸಂಜೀವ್ ರೆಡ್ಡಿ ಮತ್ತಿತರರು ಉಪಸ್ಥಿತರಿದ್ದರು.

ಗುರಿ ಇದೆ ಗುರು ಬೇಕಾಗಿದೆ

ಅಂತಾರಾಷ್ಟ್ರೀಯ ಕ್ರೀಡಾಪಟು ಅರ್ಜುನ್ ದೇವಯ್ಯ ಮಾತನಾಡಿ, ಭವ್ಯ ಭಾರತ ನಿರ್ಮಾಣ ಯುವಕರಿಂದ ಮಾತ್ರ ಸಾಧ್ಯ ಎಂಬುದನ್ನು ವಿವೇಕಾನಂದರು ಹೇಳಿದ್ದರು. ಅಂತರ್ಯದಲ್ಲಿ ಭಾರತೀಯನೆಂಬ ಭಾವವಿರುವ ಯುವಕರಿಗೆ ದೇಶಕಟ್ಟಲು ಮಾರ್ಗದರ್ಶನ ಮಾಡುವ ಗುರು ಬೇಕಾಗಿದ್ದಾರೆ. ಸಾಧನೆಯತ್ತ ಚಲಿಸುವ ರಥಕ್ಕೆ ಗುರುವೆಂಬ ಸಾರಥಿ ಸಿಕ್ಕರೆ ಯಶಸ್ಸೆಂಬ ಗುರಿ ಕಟ್ಟಿಟ್ಟ ಬುತ್ತಿ. ಈ ಮೂಲಕ ಯುವಕರು ಸೋಲಿಗೆ ಸವಾಲಾಗಿ ನಿಲ್ಲಬೇಕು ಎಂದು ಕರೆ ನೀಡಿದರು.

ಭಾರತ ಘರ್ಜಿಸಿದ್ರೆ ಗೂಬೆಗಳ ಗತಿ ?

ಆದಕ್ಕಿಂತ ಮಿಗಿಲಾಗಿ ಭಾರತದ ದೇಶ ಎಂದಿಗೂ ಯಾವ ದೇಶದ ಮೇಲೂ ಆಕ್ರಮಣ ಮಾಡಿ ಆಳಲಿಲ್ಲ. ಆದರೆ, ಉಳಿದೆಲ್ಲಾ ದೇಶಗಳೂ ನಮ್ಮನ್ನಾಳಿವೆ ಎಂದು ವಿದೇಶಿಗರೆದುರೇ ಎದೆಗುಂದದೇ ಹೇಳಿದ ಪುಂಗವ ಅವರು. ಅಲ್ಲದೆ, ನಿದ್ರೆಯಲ್ಲಿರುವ ಸಿಂಹದಂತಹ ಭಾರತವನ್ನು ಕೆಣಕುವ ಗೂಬೆಗಳೆಲ್ಲವೂ ಭಾರತದ ಘರ್ಜನೆಗೆ ಹಾರಿ ಹೋಗುತ್ತವೆ ಎಂದು ವಿವೇಕಾನಂದರು ತಮ್ಮ ಬರಹದಲ್ಲಿ ಉಲ್ಲೇಖಿಸಿದ್ದಾರೆ ಎಂದು ಶೆಣೈ ತಿಳಿಸಿದರು.